ದಿನಾಂಕ:08–03–2015

ಬೆಂಗಳೂರು ನಗರ ಸಂಚಾರ ಪೊಲೀಸ್

# ಪತ್ರಿಕಾ ಪ್ರಕಟಣೆ

ಬೆಂಗಳೂರು ನಗರದಲ್ಲಿ ಸುಗಮ ಸಂಚಾರ ವ್ಯವಸ್ಥೆಗೆ ಅನುವು ಮಾಡಿಕೊಡುವುದರ ಜೊತೆಗೆ ಅಪಘಾತಗಳನ್ನು ನಿಯಂತ್ರಿಸುವ ಸಲುವಾಗಿ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವ ಚಾಲಕ/ಸವಾರರ ವಿರುದ್ಧ **ದಿನಾಂಕ:07–03–2015** ರಂದು ರಾತ್ರಿ 9.00 ರಿಂದ ಬೆಳಗ್ಗೆ 2.00 ಗಂಟೆಯವರೆಗೆ ಬೆಂಗಳೂರು ನಗರದಾದ್ಯಂತ **94** ಸ್ಥಳಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ **10776** ವಾಹನಗಳನ್ನು ತಪಾಸಣೆ ಮಾಡಿದ್ದು, ಇವುಗಳಲ್ಲಿ **880** ವಾಹನ ಚಾಲಕ/ಸವಾರರು ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿದ್ದುದನ್ನು ಗುರ್ತಿಸಿ ಇವರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದ್ದು, ಇದರಲ್ಲಿ **875 ಪುರುಷರು ಮತ್ತು 5 ಮಹಿಳಾ ಚಾಲಕರು/ಸವಾರರು** ಒಳಗೊಂಡಿರುತ್ತಾರೆ. **ಇವುಗಳಲ್ಲಿ ಮಡಿವಾಳ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅತ್ಯಂತ ಹೆಚ್ಚು ಅಂದರೆ 55 ಪ್ರಕರಣಗಳು ದಾಖಲಾಗಿರುತ್ತದೆ.** ದಾಖಲಾಗಿರುವ ಒಟ್ಟು ಪ್ರಕರಣ ಗಳಲ್ಲಿ 3 ಬಸ್ಸು, 9 ಲಾರಿ, 38 ಆಟೋ, 122 ಕಾರು, 684 ದ್ವಿಚಕ್ರ ವಾಹನ, 14 ಮ್ಯಾಕ್ಸಿ ಕ್ಯಾಬ್, ಮತ್ತು 10 ಟೆಂಪೋ ವಾಹನಗಳಾಗಿದ್ದು, ಇವುಗಳಲ್ಲಿ **ಒಟ್ಟು 6 ವಾಹನ ಚಾಲಕರು ಗರಿಷ್ಠ ಅಂದರೆ 550mg ಪ್ರಮಾಣದಲ್ಲಿ ಮದ್ಯ ಸೇವನೆ ಮಾಡಿ ವಾಹನಗಳನ್ನು ಚಾಲನೆ ಮಾಡುತ್ತಿದ್ದುದು ಈ ವಿಶೇಷ ಕಾರ್ಯಾಚರಣೆ ವೇಳೆ ಕಂಡುಬಂದಿರುತ್ತದೆ.** ಈ ಎಲ್ಲಾ ಚಾಲಕರ ವಿರುದ್ಧ ಪ್ರಕರಣಗಳನ್ನು ದಾಖಲು ಮಾಡಿಕೊಂಡಿದ್ದು ಈ ಪ್ರಕರಣಗಳು ನ್ಯಾಯಾಲಯದಲ್ಲಿ ಇತ್ಯರ್ಥ ಮಾಡಿಕೊಳ್ಳಬೇಕಾಗಿರುತ್ತದೆ. **ಈ ಪ್ರಕರಣಗಳಲ್ಲಿ ವಶಪಡಿಸಿಕೊಂಡಿರುವ ಚಾಲನಾ ಪತ್ರಗಳನ್ನು ಅಮಾನತ್ತು ಪಡಿಸುವಂತೆ ಸಾರಿಗೆ ಇಲಾಖೆಗೆ ಶಿಫಾರಸ್ಸು ಮಾಡಲಾಗುವುದು.**

-----